ಆಗಿಲ್ಲ. 'ಬಯಲು ಸೀಮೆ' ರಂಗಾಯಣ ಅಂದರೆ ತುಮಕೂರು ಒಂದೇ ಅಲ್ಲ. ದಾವಣಗೆರೆ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ರಾಮನಗರ, ಅರಸೀಕೆರೆ, ಕಡೂರು ಈ ಎಲ್ಲ ಪ್ರದೇಶಗಳನ್ನು ಸೇರಿಸಿ ಮಾಡಬೇಕು ಎನ್ನುವ ಆಗ್ರಹ ನಮ್ಮದು. ಇಲ್ಲಿ ಜನಪದ, ಪೌರಾಣಿಕ ರಂಗಭೂಮಿ ಚೆನ್ನಾಗಿದೆ. ಇವುಗಳನ್ನು ಅಧ್ಯಯನ ಮಾಡುವುದು ಹೇಗೆ? ಹಾಡುತ್ತ ಅಭಿನಯಿಸುವ ಪರಂಪರೆ ನಮ್ಮಲ್ಲಿ ಇದೆ. ಆದರೆ ಅದನ್ನು ಹೇಳಿಕೊಡುವವರು, ಕಲಿಸುವವರು ಯಾರು?

ತುಮಕೂರು ಜಿಲ್ಲೆ ರಂಗಭೂಮಿ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದೆ. ಗುಬ್ಬಿ ವೀರಣ್ಣ ಅವರು ಒಳ್ಳೆಯ ಬುನಾದಿ ಹಾಕಿದ್ದಾರೆ. ಇತ್ತೀಚೆಗೆ ಮೈಸೂರು, ಶಿವಮೊಗ್ಗದಲ್ಲಿ ನಡೆದ ರಂಗಾಯಣದ ಕಾರ್ಯಕ್ರಮಗಳಲ್ಲಿ ಜಿಲ್ಲೆಯ ಪ್ರಾತಿನಿಧ್ಯವೇ ಇಲ್ಲ. ಹೀಗಿದ್ದಾಗ ಇಲ್ಲಿನ ಯುವಜನರು ಹೇಗೆ ಬೆಳೆಯುತ್ತಾರೆ.

ತುಮಕೂರಿನಲ್ಲಿ ಗುಬ್ಬಿ ವೀರಣ್ಣ ಕ್ಯಾಂಪಸ್ ರೂಪಿಸಿ ಸಂಶೋಧನಾ ಕೇಂದ್ರ ಮಾಡಬಹುದು. ಇಲ್ಲಿಯ ಬರಹಗಾರರು, ನಟರು ಒಂದು ಕಡೆ ಸೇರಲು ಇದರಿಂದ ಸಾಧ್ಯವಾಗುತ್ತದೆ. ಹೊಸ ನಾಟಕಗಳನ್ನು ಬರೆಯುವವರು, ಭಾಷಾಂತರಿಸುವವರು ಹುಟ್ಟುತ್ತಾರೆ.

◆ ಮರಾಠಿ ರಂಗಭೂಮಿ ನಮಗಿಂತ ಮುಂದಿದೆ ಎನ್ನುವ ಮಾತು ಇದೆಯಲ್ಲಾ.

ಕನ್ನಡ ರಂಗಭೂಮಿಯಲ್ಲಿ ಹೊಸ ಪಠ್ಯಗಳು ಹೆಚ್ಚು. ಮರಾಠಿ ರಂಗಭೂಮಿಯಲ್ಲಿ ನಮ್ಮಷ್ಟು ಹೊಸ ಪಠ್ಯಗಳು ಇಲ್ಲ. ಆದರೆ ಮರಾಠಿ ರಂಗಭೂಮಿಯು ಪ್ರೇಕ್ಷಕರ ಜತೆ ಬಹಳ ದೊಡ್ಡ ಸಂಬಂಧ ಇಟ್ಟುಕೊಂಡಿದೆ; ಪರಂಪರೆಯಲ್ಲಿದ್ದ ಸಂಗೀತ ನಾಟಕಗಳನ್ನು ಇಂದಿಗೂ ಮುಂದುವರಿಸಿದೆ. ಜನರ ಜತೆಯೇ ಪ್ರಯೋಗಗಳನ್ನು ಮಾಡುತ್ತಿದೆ.

ನಮ್ಮಲ್ಲಿನ ದೊಡ್ಡ ಕೊರತೆ ಅಂದರೆ ವೃತ್ತಿರಂಗಭೂಮಿ ವೈಚಾರಿಕವಾಗಿಲ್ಲ. ಅದು ಕಲಾವಿದರನ್ನು ಬೆಳೆಸುವುದಿಲ್ಲ. ಅಲ್ಲಿ ಹೇಳುವುದೆಲ್ಲ ವಾಸ್ತವಕ್ಕೆ ದೂರ ಎಂದು ನಮ್ಮ ಬಹುಸಂಖ್ಯಾತ ನಾಟಕಕಾರರೇ ಇದರಿಂದ ದೂರವುಳಿದರು. ಹವ್ಯಾಸಿ ರಂಗಭೂಮಿ ಪ್ರೇಕ್ಷಕರನ್ನು ಆರಂಭದಿಂದಲೇ ಕಳೆದುಕೊಂಡಿತು. ದೊಡ್ಡಮಟ್ಟದಲ್ಲಿ ನಾಟಕೋತ್ಸವಗಳನ್ನು ಸಂಘಟಿಸಿದರೆ ಇಲ್ಲವೆ ಅನುದಾನ ಕೊಟ್ಟರೆ ಜನರು ಇರುತ್ತಾರೆ. ಈ ನಾಟಕಗಳನ್ನು ಬೆಳೆಸಬೇಕಾದ ಅಕಾಡೆಮಿಗಳು ನಿಷ್ಕ್ರಿಯವಾಗಿವೆ. ಪರಂಪರೆಯ ಸಂಬಂಧಗಳನ್ನು ನಾವು ವಿಮರ್ಶೆ ಮಾಡಿಕೊಳ್ಳುತ್ತಿಲ್ಲ. ಅದೇ ರಂಗಶಾಲೆ (ರೆಪರ್ಟರಿ) ನಾಟಕಗಳಿಗೆ ಪ್ರೇಕ್ಷಕರು ಇರುತ್ತಾರೆ.

ಮರಾಠಿಯಲ್ಲಿ ಭಾಷೆ, ಭಾಷಾ ಸಂಬಂಧ, ಪರಂಪರೆ ಹಾಗೂ ರಂಗಭೂಮಿಯ ನಂಟು ಪರಸ್ಪರ ಚೆನ್ನಾಗಿದೆ. ಆದರೆ ನಮ್ಮಲ್ಲಿ ನಾಟಕವನ್ನು ವ್ಯವಧಾನದಿಂದ ರೂಪಿಸುತ್ತಿಲ್ಲ. ವ್ಯವಧಾನದಿಂದ ರೂಪಿಸಲು ಅಗತ್ಯವಾದ

